# 'ಮಹಾದಾನಿ' ಅಜೀಮ್‌ಜಿ

ಹದಿನೈದು ವರ್ಷಗಳ ಹಿಂದಿನ ಮಾತು. ಬೆಂಗಳೂರಿನ ಅರಮನೆ ಮೈದಾನದಲ್ಲಿ 'ಬೆಂಗಳೂರು ಐಟಿ ಡಾಟ್ ಕಾಮ್' ಉದ್ಘಾಟನೆಗೆ ಸಾವಿರಾರು ಜನ ಸೇರಿದ್ದರು. ಆಮಂತ್ರಣ ಪತ್ರದಲ್ಲಿ ಮುಖ್ಯ ಅತಿಥಿಗಳಾಗಿ ರಾಜ್ಯದ ಇಬ್ಬರು ಪ್ರಮುಖ 'ಐ.ಟಿ ದೊರೆ'ಗಳ ಹೆಸರಿದ್ದವು. ಅವರಲ್ಲಿ ಒಬ್ಬರು ಸಮಾರಂಭಕ್ಕೆ ಬಂದಿದ್ದರು. ಸರ್ಕಾರಿ ಕಾರ್ಯಕ್ರಮವಾದ್ದರಿಂದ ಯಥಾಪ್ರಕಾರ ತಡವಾಗಿ ಸಭೆ ಆರಂಭವಾಯಿತು. ಐದಾರು ಜನರ ಭಾಷಣದ ಬಳಿಕ ಹಾಜರಿದ್ದ ಆ 'ಐ.ಟಿ ದೊರೆ' ಮಾತನಾಡಿದರು. 'ನನಗೆ ಕೈತುಂಬ ಕೆಲಸವಿದೆ. ನಾನಿವತ್ತು ತುರ್ತು ಕೆಲಸದ ಮೇಲೆ ಚೀನಾದಲ್ಲಿ ಇರಬೇಕಿತ್ತು. ಆದರೂ ಆ ಕೆಲಸಗಳನ್ನೆಲ್ಲ ಬಿಟ್ಟು ಈ ಸಮಾರಂಭಕ್ಕೆ ಬಂದಿದ್ದೇನೆ' ಎಂದವರು ಭಾಷಣ ಮಾಡಿದರು. ಆ ಸಮಾರಂಭಕ್ಕೆ ಗೈರುಹಾಜರಾಗಿದ್ದ ಮುಖ್ಯ ಅತಿಥಿ, ಇನ್ನೊಬ್ಬ ಐ.ಟಿ. ದೊರೆ ಅಜೀಮ್ ಪ್ರೇಮ್‌ಜಿ. ಸಂಘಟಕರು ಪ್ರೇಮ್‌ಜಿ ಅನುಪಸ್ಥಿತಿಯಲ್ಲಿ ಅವರನ್ನು ಸ್ವಾಗತಿಸುತ್ತಾ, 'ಅಜೀಮ್ ಪ್ರೇಮ್‌ಜಿಯವರಿಗೆ ಕೈತುಂಬ ಕೆಲಸವಿದೆ. ಅವರು ತುರ್ತು ಕೆಲಸದ ನಿಮಿತ್ತ ವಿದೇಶಕ್ಕೆ ತೆರಳಿದ್ದಾರೆ' ಎಂದು ತಿಳಿಸಿದರು! ಇದು ಅಜೀಮ್ ಪ್ರೇಮ್‌ಜಿ ಅವರ ವ್ಯಕ್ತಿತ್ವದ ಒಂದು ತುಣುಕು. ಅವರಿಗೂ ಇತರರಿಗೂ ಇರುವ ವ್ಯತ್ಯಾಸವೂ ಹೌದು. 'ಮಾತು ಕಡಿಮೆ– ಹೆಚ್ಚು ದುಡಿಮೆ' ಎನ್ನುವುದು ಅಜೀಮ್ ಪ್ರೇಮ್‌ಜಿ ವ್ಯಕ್ತಿತ್ವದ ಅವಿಭಾಜ್ಯ ಉಕ್ತಿ.

ಮುಂಬೈಯಲ್ಲಿ ಷಿಯಾ ಮುಸ್ಲಿಂ ಕುಟುಂಬದಲ್ಲಿ ಹುಟ್ಟಿ (ಬರ್ತ್‌ಡೇ: 24–7–1945) ಬೆಂಗಳೂರಿನಲ್ಲಿ ಬಾಳುತ್ತಿರುವ 70ರ ಹರೆಯದ ಅಜೀಮ್ ಪ್ರೇಮ್‌ಜಿ, ಇದೀಗ ಸತತ ಮೂರನೆ ವರ್ಷ 'ಅತ್ಯಂತ ಉದಾರಿ ಭಾರತೀಯ' ಎಂದು ಹೆಸರು ಗಳಿಸಿದ್ದಾರೆ. ಅದಕ್ಕೆ ಕಾರಣ ಅವರು ಮಾಡುತ್ತಿರುವ ದಾನ. ಒಟ್ಟು 17.5 ಕೋಟಿ ಅಮೆರಿಕನ್ ಡಾಲರ್ ಸಂಪತ್ತಿನ ಒಡೆಯರಾದ ಅವರು, ಈ ವರ್ಷ 27,514 ಕೋಟಿ ರೂಪಾಯಿಗಳನ್ನು ದಾನ ಮಾಡಿದ್ದಾರೆ– ಅದೂ ಶಿಕ್ಷಣ ಕ್ಷೇತ್ರಕ್ಕೆ. 8 ರಾಜ್ಯಗಳಲ್ಲಿ 3.5 ಲಕ್ಷ ಶಾಲೆಗಳಿಗೆ ಈ ದಾನ ಹೋಗಿದೆ. ಅಜೀಮ್ ಪ್ರೇಮ್‌ಜಿ ಭಾರತದ ಮೂರನೇ ಅತಿದೊಡ್ಡ ಶ್ರೀಮಂತರು. ಭಾರತದ 'ನಂಬರ್ ಒನ್' ಶ್ರೀಮಂತರಾದ (ಒಟ್ಟು ಆಸ್ತಿಯ ಮೊತ್ತ 18.9 ಶತಕೋಟಿ ಅಮೆರಿಕನ್ ಡಾಲರ್) ರಿಲಯನ್ಸ್ ಉದ್ಯಮದ ಮುಖೇಶ್ ಅಂಬಾನಿಯವರು ಈ ವರ್ಷ ಮಾಡಿರುವ ದಾನದ ಮೊತ್ತ 345 ಕೋಟಿ ರೂಪಾಯಿ. ಅಂದರೆ, ಅಜೀಮ್ ಪ್ರೇಮ್‌ಜಿಯವರ ದಾನ ಎಷ್ಟು ಪ್ರಧಾನ ಎನ್ನುವುದು ಗೊತ್ತಾಗುತ್ತದೆ.

ವಿಪ್ರೊ ಲಿಮಿಟೆಡ್ ಕಂಪೆನಿಯ ಚೇರ್‌ಮನ್ ಆಗಿರುವ ಅಜೀಮ್ ಅವರ ಬಳಿ ಕಂಪೆನಿಯ ಶೇಕಡಾ 73ರಷ್ಟು ಷೇರುಗಳಿವೆ. 2013ರಲ್ಲಿ ಅವರು ತಮ್ಮ ಆಸ್ತಿಯ ಶೇಕಡಾ 25ರಷ್ಟನ್ನು ದಾನ ಮಾಡಿದ್ದರು. 'ಮುಂದಿನ ಐದು ವರ್ಷಗಳಲ್ಲಿ ಇನ್ನೂ ಶೇಕಡಾ 25ರಷ್ಟು ಆಸ್ತಿಯನ್ನು ದಾನ ಮಾಡುತ್ತೇನೆ' ಎಂದು ಸಂಕಲ್ಪ ಮಾಡಿದ್ದರು. ಈಗ 2015ರಲ್ಲಿ ದಾನ ಮಾಡಿರುವ ಒಟ್ಟು ಆಸ್ತಿಯ ಪ್ರಮಾಣ ಶೇಕಡಾ 39ಕ್ಕೆ ತಲುಪಿದೆ. 17.5 ಶತಕೋಟಿ ಡಾಲರ್‌ಗಳಲ್ಲಿ ಶೇಕಡಾ 39ರಷ್ಟು ದಾನ ಮಾಡಿದ್ದಾರೆ ಎಂದರೆ, ದಾನದ ಒಟ್ಟು ಮೊತ್ತವನ್ನು ಊಹಿಸಿಕೊಳ್ಳಿ. 'ದಿ ಗಿವಿಂಗ್ ಪ್ಲೆಡ್ಜ್' ಎನ್ನುವ ಹೆಸರಿನಲ್ಲಿ ಜಗತ್ತಿನ ಶತಕೋಟ್ಯಧಿಪತಿಗಳನ್ನು ದಾನಕ್ಕೆ ಪ್ರೇರೇಪಿಸಿದ ವಾರೆನ್ ಬಫೆಟ್ ಮತ್ತು ಬಿಲ್ ಗೇಟ್ಸ್ ಜತೆ ಭಾರತದಿಂದ ಮೊದಲು ಸೇರಿಕೊಂಡವರು ಅಜೀಮ್‌ಜಿ. ಅವರನ್ನು ಆ ಬಳಿಕ ನಾರಾಯಣಮೂರ್ತಿ ಮತ್ತು ನಂದನ್ ನೀಲೇಕಣಿ ಹಿಂಬಾಲಿಸಿದರು. ಈ ಮೂವರೂ ಭಾರತದ ಹೆಮ್ಮೆಯ ಮಹಾದಾನಿಗಳೇ.

ನಮ್ಮ ಅಪ್ಪ–ಅಮ್ಮನ ಕಾಲದಲ್ಲಿ ಅತ್ಯಂತ ಜನಪ್ರಿಯವಾಗಿದ್ದ ಬಟ್ಟೆ ಒಗೆಯುವ ಬಾರ್‌ಸೋಪ್ 787 ಮತ್ತು ಸನ್‌ಫ್ಲವರ್ ವನಸ್ಪತಿ ಅಡುಗೆ ಎಣ್ಣೆ. ಆ ಉತ್ಪನ್ನಗಳು ಬರುತ್ತಿದ್ದುದು ಮಹಾರಾಷ್ಟ್ರದ ಜಲಗಾಂವ್‌ನ ವೆಸ್ಟರ್ನ್ ಇಂಡಿಯಾ ವೆಜಿಟೆಬಲ್ ಪ್ರಾಡಕ್ಟ್ಸ್ ಲಿಮಿಟೆಡ್ ಕಂಪೆನಿಯಿಂದ. ಅದನ್ನು ಸ್ಥಾಪಿಸಿದವರು ಅಜೀಮ್‌ಜಿಯವರ ತಂದೆ ಮಹಮ್ಮದ್ ಹಾಶಿಂ ಪ್ರೇಮ್‌ಜಿ. ಕಛ್‌ನಿಂದ ಮುಂಬೈಗೆ ವಲಸೆ ಬಂದ, ಚತುರ ವ್ಯಾಪಾರಿ ಹಾಶಿಂ ಅವರು 'ರೈಸ್ ಕಿಂಗ್ ಆಫ್ ಬರ್ಮಾ' ಎಂದೇ ಹೆಸರಾಗಿದ್ದವರು. ಅವರು ನಿಧನರಾದಾಗ ಅಜೀಮ್ ಸ್ಟಾನ್‌ಫೋರ್ಡ್ ಯೂನಿವರ್ಸಿಟಿಯಲ್ಲಿ ಬಿಎಸ್‌ಸಿ (ಎಲೆಕ್ಟ್ರಿಕಲ್ ಎಂಜಿನಿಯರಿಂಗ್) ಕಲಿಯುತ್ತಿದ್ದರು. ಅದು ನಮ್ಮ ಬಿಇ ಗೆ ಸಮಾನವಾದ ಕೋರ್ಸ್. 21ರ ಹರೆಯದ ಅಜೀಮ್ ಮುಂಬೈಗೆ ಬಂದು ಅಪ್ಪನ ಕಂಪೆನಿಯ ನೇತೃತ್ವ ವಹಿಸಿದರು. ಕ್ರಮೇಣ ಕಂಪೆನಿಯ ಉತ್ಪಾದನಾ ವಿಧಾನಗಳನ್ನೂ, ಉತ್ಪನ್ನಗಳನ್ನೂ ಬದಲಿಸಿದರು. ಬೇಕರಿ ಕೊಬ್ಬು, ಟಾಯ್ಲೆಟ್ ಸೋಪು, ಶಾಂಪೂ, ಬೇಬಿ ಸೋಪು, ವಿದ್ಯುತ್ ಬಲ್ಬ್, ಹೈಡ್ರಾಲಿಕ್ ಸಿಲಿಂಡರ್– ಹೀಗೆ ಉತ್ಪನ್ನಗಳು ಬೆಳೆದವು. ಕಂಪೆನಿಯ ಹೆಸರು ವಿಪ್ರೊ ಆಯಿತು. 80ರ ದಶಕದಲ್ಲಿ ಐಟಿ ಉದ್ಯಮಕ್ಕೆ ಇರುವ ಅವಕಾಶಗಳನ್ನು ಗಮನಿಸಿ, ಮಿನಿ ಕಂಪ್ಯೂಟರ್ ಉತ್ಪಾದನೆಗೆ ಅಮೆರಿಕದ ಸೆಂಟಿನಲ್ ಜತೆ ಕೈಜೋಡಿಸಿದರು. ಅಲ್ಲಿಂದೀಚೆಗಿನದ್ದು ಇತಿಹಾಸ. 40 ವರ್ಷಗಳ ಅವರ ಅನುಭವ ಮತ್ತು ಮಾರ್ಗದರ್ಶನ ಕಂಪೆನಿಯ ಉನ್ನತಿಗೆ ಕಾರಣ.

ಪತ್ನಿ ಯಾಸ್ಮಿನ್ ಕಾದಂಬರಿ ಬರೆದು ಹೆಸರು ಗಳಿಸಿದ್ದಾರೆ. ಮೊದಲ ಮಗ ರಿಶಾದ್ ಅಪ್ಪನ ಕಂಪೆನಿಗೆ ಹೆಗಲು ಕೊಟ್ಟು ದುಡಿಯುತ್ತಿದ್ದಾರೆ. ಇನ್ನೊಬ್ಬ ಮಗ ತಾರಿಖ್. ಮೊಮ್ಮಕ್ಕಳು ರೊಹಾನ್ ಮತ್ತು ರಿಯಾ ಜತೆಗೆ ಆಟವಾಡಿಕೊಂಡು ಇರಬೇಕಾದ ವಯಸ್ಸಿನಲ್ಲೂ, ಅಜೀಮ್‌ಜಿ ಬೆಳಿಗ್ಗೆ 9ಕ್ಕೇ ಕಚೇರಿಗೆ ಹಾಜರಾಗುತ್ತಾರಂತೆ. ಶಿಸ್ತು, ಮೃದುಮಾತುಗಳ 'ಜಾಗತಿಕ ಬ್ರ್ಯಾಂಡ್ ಅಂಬಾಸಿಡರ್'ರಂತೆ ಕಾಣಿಸುವ ಅಜೀಮ್‌ಜಿ, ಇವತ್ತಿನ 'ದೊಡ್ಡ ಗಂಟಲಿನ ಸಾಮ್ರಾಜ್ಯ'ದಲ್ಲಿ ನಿಜಕ್ಕೂ ಅನುಕರಣೀಯ ಕೋಟ್ಯಧಿಪತಿ. ■



Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65